1343 (1651) ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ 5 ನೇ ವೇತನ ಆಯೋಗವು ಮಾಡಿರುವ ಶಿಫಾರಸ್ಸುಗಳಾವುವು,

ಆ) ಈ ಎಲ್ಲಾ ಶಿಫಾರಸ್ಸುಗಳನ್ನು ಯಥಾವತ್ತಾಗಿ ಸರ್ಕಾರ ಒಪ್ಪಿಕೊಂಡಿದೆಯೇ,

ಇ) ಹಾಗಿದ್ದಲ್ಲಿ, ಯಾವಾಗ ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 5 ನೇ ರಾಜ್ಯ ವೇತನ ಆಯೋಗವು ಸಲ್ಲಿಸಿರುವ ತನ್ನ ಅಂತಿಮ ವರದಿಯ ಮೊದಲನೆಯ ಸಂಪುಟದಲ್ಲಿ ಮಾಡಿರುವ ಶಿಫಾರಸ್ಸುಗಳ ಸಾರಾಂಶದ ಪ್ರತಿಯನ್ನು ಲಗತ್ತಿಸಿದೆ

ಆ) ಸರ್ಕಾರವು ವೇತನ ಆಯೋಗದ ಎಲ್ಲಾ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ

ಇ) ಆಯೋಗವು ಶಿಫಾರಸ್ಸು ಮಾಡಿರುವಂತೆ, ದಿನಾಂಕ 1–07–2005 ರಿಂದ ಕಾಲ್ಪನಿಕವಾಗಿ ಅನ್ವಯವಾಗುವಂತೆ ವೇತನವನ್ನು ನಿಗದಿಪಡಿಸಿ, ಪರಿಷ್ಕರಿಸಿದ ವೇತನ ಮತ್ತು ಪಿಂಚಣಿಯನ್ನು ದಿನಾಂಕ 1–04–2007 ರಿಂದ ವಿತರಿಸಲಾಗುವುದು ಹಾಗೂ ದಿನಾಂಕ 1–04–2006 ರಿಂದ 31–3–2007 ರ ವರೆಗಿನ ಬಾಕಿ ವೇತನವನ್ನು 2008–09 ನೇ ಸಾಲಿನಲ್ಲಿ ವಿತರಿಸಲಾಗುವುದು

ವೇತನ ಆಯೋಗದ ಶಿಫಾರಸ್ಸುಗಳ ಸಾರಾಂಶ

91 ಹನ್ನೊಂದು ಲಕ್ಷಕ್ಕೂ ಮೀರಿದ ರಾಜ್ಯ ಸರ್ಕಾರ, ಅನುದಾನಿತ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ನೌಕರರು, ವಿಶ್ವವಿದ್ಯಾಲಯಗಳ ಮತ್ತು ಕಾಲೇಜುಗಳ ಬೋಧಕೇತರ ಸಿಬ್ಬಂದಿ ವರ್ಗಗಳು ಮತ್ತು ನಿವೃತ್ತ ಮತ್ತು ಕುಟುಂಬ ವೇತನದಾರರಿಗೆ ಆಯೋಗದ ಶಿಫಾರಸ್ಸುಗಳು ಅನ್ವಯವಾಗುತ್ತವೆ

92 ವರದಿಯನ್ನು ಎರಡು ಸಂಪುಟಗಳಲ್ಲಿ ತಯಾರಿಸಿದೆ ಮೊದಲ ಈ ಸಂಪುಟದಲ್ಲಿ ಸಮಗ್ರ ವೇತನ ಶ್ರೇಣಿಯ ರಚನೆ, ತುಟ್ಟಿ, ಮನೆಬಾಡಿಗೆ, ನಗರ ಪರಿಹಾರ ಮತ್ತು ಗ್ರಾಮೀಣ ಭತ್ಯೆ ಹಾಗೂ ನಿವೃತ್ತಿ ವೇತನ ಮತ್ತಿತರ ಸೌಲಭ್ಯಗಳ ವಿವರಗಳನ್ನು ಒಳಗೊಂಡಿದೆ ಎರಡನೇ ಸಂಪುಟವನ್ನು ಪ್ರತ್ಯೇಕವಾಗಿ ನೀಡಲಿದ್ದು, ಅದರಲ್ಲಿ, ಇಲಾಖೆಗಳಲ್ಲಿರುವ ವೇತನ ಹಂಚಿಕೆ, ವೇತನ ಶ್ರೇಣಿಯಲ್ಲಿನ ನ್ಯೂನತೆಗಳು, ವೃಂದಗಳಲ್ಲಿನ ಸಮಸ್ಯೆಗಳು, ಉಳಿದ ಭತ್ಯೆಗಳು ಮತ್ತು ಆಡಳಿತಾತ್ಮಕ ಸುಧಾರಣಾ ಅಂಶಗಳನ್ನು ಒಳಗೊಂಡಿದೆ

93 ವೇತನದ ಪರಿಷ್ಕರಣೆಯಿಂದಾಗುವ ವೆಚ್ಚ ಪೂರ್ತಾ ರೂ 920 ಕೋಟಿಗಳು ಆಗಲಿದೆ ನಿವೃತ್ತಿ ವೇತನ ಪರಿಷ್ಕರಣೆಗೆ ಮತ್ತು ಪಿಂಚಣಿಯ ಪರಿಷ್ಕರಣೆಯಿಂದಾಗುವ ವೆಚ್ಚ, ಒಂದು ಪೂರ್ಣ ವರ್ಷಕ್ಕೆ ರೂ 430 ಕೋಟಿಗಳೆಂದು ಅಂದಾಜಿಸಲಾಗಿದೆ

ವೇತನ

94 i ರಾಜ್ಯ ಸರ್ಕಾರ ತನ್ನದೇ ಆದ ವೇತನ ರಚನೆಯ ಪರಂಪರೆಯನ್ನು ಮುಂದುವರೆಸುವುದು

ii 01 ನೇ ಜುಲೈ 2005 ರಲ್ಲಿದ್ದ ತುಟ್ಟಿಭತ್ಯೆಯನ್ನು ಅನುಸರಿಸಿ ರಚಿತವಾಗಿದೆ

iii ಪರಿಷ್ಕೃತ ವೇತನ ಶ್ರೇಣಿಗಳಲ್ಲಿನ ವೇತನವನ್ನು ಸಂಭವನೀಯವಾಗಿ 1 ನೇ ಜುಲೈ 2005 ರಿಂದ ನಿಗದಿಪಡಿಸಿ ಆರ್ಥಿಕ ಸವಲತ್ತುಗಳನ್ನು 1 ನೇ ಏಪ್ರಿಲ್ 2006 ರಿಂದ ವಿಸ್ತರಿಸಲು ಸೂಚಿಸಲಾಗಿದೆ

iv ಪರಿಷ್ಕೃತ ವೇತನವನ್ನು, ಕೆಳಕಂಡಂತೆ ನಿಗದಿಪಡಿಸಲಾಗುವುದು

(ಅ) ದಿನಾಂಕ 1ನೇ ಜುಲೈ 2005ರಲ್ಲಿದ್ದ ಮೂಲವೇತನ ಮತ್ತು ತುಟ್ಟಿಭತ್ಯೆ ವಿಲೀನ

(ಆ) ಶೇ 17 5 ರಷ್ಟು ಮೂಲವೇತನ ಹೆಚ್ಚಳ

(ಇ) ಈ ಒಟ್ಟಾರೆ ಮೊತ್ತ ಪರಿಷ್ಕೃತ ವೇತನವಾಗುತ್ತದೆ

v ಮೂಲವೇತನದ ಶೇ 17 5 ಹೆಚ್ಚಳದಲ್ಲಿ, 1 ನೇ ಏಪ್ರಿಲ್ 2006 ರಲ್ಲಿ ಮಂಜೂರಾದ ಶೇ 10 ರ ಮಧ್ಯಂತರ ಪರಿಹಾರವು ಭಾಗವಾಗಿರುತ್ತದೆ

vi 01–07–2005 ರಲ್ಲಿದ್ದಂತೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆಯು ಪರಿಷ್ಕೃತ ಪೂರ್ವದಲ್ಲಿ ರೂ 4275 ಇದ್ದು ಶೇ 17 ರಷ್ಟು ಸೇರಿಸಿ ಇದನ್ನು ರೂ 4,800 ಗಳಿಗೆ ಹೆಚ್ಚಿಸಲಾಗಿದೆ

vii ವೇತನ ಬಡ್ತಿಗಳ ದರಗಳು ಪ್ರಸ್ತುತ ರೂ 50 ರಿಂದ ರೂ 500 ಗಳ ಶ್ರೇಣಿಯಲ್ಲಿವೆ ಹೊಸ ವೇತನ ಬಡ್ತಿ ದರಗಳು ರೂ 100 ರಿಂದ ರೂ 850 ಶ್ರೇಣಿಯಲ್ಲಿರುತ್ತವೆ

viii ಪ್ರಸ್ತುತ 85 ಹಂತಗಳ ಮತ್ತು 20 ನಿಗದಿತ ವೇತನ ಶ್ರೇಣಿಗಳಿಗೆ ಪ್ರತಿಯಾಗಿ ಮುಖ್ಯ ವೇತನ ಶ್ರೇಣಿಯು (Master Scales) 89 ಹಂತಗಳನ್ನು ಹೊಂದಿದ್ದು, ಕೆಳಹಂತದಲ್ಲಿ ಮೂರು ಹೊಸ ವೇತನ ಶ್ರೇಣಿಗಳನ್ನು ಮತ್ತು ಮೇಲಿನ ಹಂತದಲ್ಲಿ ಎರಡು ಹೊಸ ವೇತನ ಶ್ರೇಣಿಗಳನ್ನು ರಚಿಸಲಾಗಿದೆ ಇದರಿಂದ ವೇತನ ಶ್ರೇಣಿಯ ಊರ್ಧ್ವ ಮುಖ ಬೆಳವಣಿಗೆಗೆ ಅವಕಾಶ ಕಲ್ಪಿಸಿ, ಸ್ವಲ್ಪಮಟ್ಟಿಗೆ ವೇತನ ಸ್ಥಗಿತ ಹಾಗೂ ಒಗ್ಗೂಡಿಸುವ (Bunching) ಸಮಸ್ಯೆಗಳನ್ನು ಪರಿಹರಿಸಿದಂತಾಗುತ್ತದೆ

ಭತ್ಯೆಗಳು – ತುಟ್ಟಿಭತ್ಯೆ

9 5 ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ನೀತಿಯಂತೆ ನೀಡಲು ಶಿಫಾರಸ್ಸು ಮಾಡಲಾಗಿದೆ ಆದರೆ, ಆಯೋಗವು 1 ನೇ ಜುಲೈ 2005 ರಲ್ಲಿದ್ದ ಸೂಚ್ಯಾಂಕ ಆಧಾರದ ಮೇಲೆ ಶೇ 71 ರಷ್ಟು ತುಟ್ಟಿಭತ್ಯೆಯನ್ನು ಮೂಲ ವೇತನದಲ್ಲಿ ವಿಲೀನಗೊಳಿಸಿ ಹೊಸ ವೇತನ ರಚನೆಯನ್ನು ಮಾಡಿದೆ ಪರಿವರ್ತಿತ ಅಪವರ್ತ್ಯ(ಗುಣಾಕಾರಾಂಶ multiplication factor) 0 875 ನ್ನು ಸರ್ಕಾರಿ ನೌಕರರಿಗೆ ದಿನಾಂಕ 1–01–2006 ರಿಂದ ಸಂದಾಯ ಮಾಡುವ ತುಟ್ಟಿಭತ್ಯೆಗೆ ಪರಿಗಣಿಸಲು ಸೂಚಿಸಿದೆ

ಮನೆ ಬಾಡಿಗೆ ಭತ್ಯೆ

96 ಮನೆ ಬಾಡಿಗೆ ಭತ್ಯದ ಉದ್ದೇಶಗಳಿಗಾಗಿ ಈಗಿರುವ ನಗರಗಳ ವರ್ಗೀಕರಣವು ಮುಂದುವರೆಯುವುದು ಮನೆ ಬಾಡಿಗೆ ಭತ್ಯೆಯ ದರವನ್ನು ಬೃಹತ್ ಬೆಂಗಳೂರಿಗೆ ಪ್ರಸ್ತುತ ಮೂಲ ವೇತನದ ಶೇ 13 ರಿಂದ ಪರಿಷ್ಕೃತ ಮೂಲ ವೇತನದ ಶೇ 15 ಕ್ಕೆ ಹೆಚ್ಚಿಸಲಾಗಿದೆ ಇತರ ನಗರ ಪ್ರದೇಶಗಳ ಮತ್ತು ಪಟ್ಟಣ ಪ್ರದೇಶಗಳ ಮನೆ ಬಾಡಿಗೆ ಭತ್ಯೆಗಳು ಪರಿಷ್ಕೃತ ವೇತನದಲ್ಲೂ ಪ್ರಸ್ತುತ ದರದಲ್ಲೇ ಮುಂದುವರೆಯುತ್ತವೆ

ನಗರ ಪರಿಹಾರ ಭತ್ಯೆ

97 ಪೆಟ್ರೋಲ್ ಮತ್ತು ಡಿಸೇಲ್ ಬೆಲೆಗಳ ತೀವ್ರ ಹೆಚ್ಚಳ, ಬಸ್‌ಗಳಲ್ಲಿ ಸಂಚರಿಸಲು ಬಸ್ ದರಗಳು ಮತ್ತು ಮಾಸಿಕ ಬಸ್ ಪಾಸ್‌ಗಳ ಬೆಲೆಗಳಲ್ಲಿನ ಹೆಚ್ಚಳವನ್ನು ಮನಗಂಡು, ಈಗಿರುವ ನಗರ ಪರಿಹಾರ ಭತ್ಯೆಯ 4 ವೇತನ ಶ್ರೇಣಿಗಳ ಹಂತಗಳನ್ನು 2 ವೇತನ ಶ್ರೇಣಿಗಳ ಹಂತಗಳಿಗೆ ಇಳಿಸಿ, ಕೆಳಕಂಡಂತೆ ನೀಡಲಾಗಿದೆ

ಕೋಷ್ಟಕ 91

ಪರಿಷ್ಕೃತ ನಗರ ಪರಿಹಾರ ಭತ್ಯೆ

ವೇತನ ಹಂತಗಳು (ಮೂಲ ವೇತನ)	ವರ್ಗೀಕೃತ ನಗರಗಳಿಗೆ ನಗರ ಪರಿಹಾರ ಭತ್ಯೆ (ಮಾಸಿಕ ರೂ ಗಳಲ್ಲಿ)		
	ಎ	ಬಿ1	ಬಿ2
ಮೂಲ ವೇತನ ರೂ 4800–7799	150	100	80
ಮೂಲವೇತನ ರೂ 7800 ಕ್ಕೆ ಮೇಲ್ಪಟ್ಟು	300	200	80
ಗ್ರಾಮೀಣ ಭತ್ಯೆ			

9 8 25,000 ಕ್ಕೂ ಕಡಿಮೆ ಜನಸಂಖ್ಯೆಯಿರುವ 'E' ವರ್ಗದ ಪ್ರದೇಶಗಳಲ್ಲಿನ ರಾಜ್ಯಸರ್ಕಾರಿ ನೌಕರರು ರೂ 100 ಗಳನ್ನು ಗ್ರಾಮೀಣ ಭತ್ಯೆಯನ್ನಾಗಿ ಪಡೆಯುವರು ಈ ಸವಲತ್ತನ್ನು ಗ್ರಾಮೀಣ ಪ್ರದೇಶಗಳ ಕೆಲವು ಮೂಲ ಸೌಕರ್ಯಗಳ ಕೊರತೆಗಳ ಹಿನ್ನೆಲೆಯಲ್ಲಿ ನೀಡಲಾಗಿದೆ

ನಿವೃತ್ತಿ ಮತ್ತು ಕುಟುಂಬ ವೇತನ ಸೌಲಭ್ಯಗಳು

9 9 ರಾಜ್ಯದಲ್ಲಿ ಒಟ್ಟು 3,79,336 ನಿವೃತ್ತಿ/ಕುಟುಂಬ ವೇತನದಾರರಿದ್ದಾರೆ ಇವರಲ್ಲಿ 3,56,228 ಜನರು ಬ್ಯಾಂಕುಗಳ ಮೂಲಕ ಮತ್ತು ಉಳಿದ 23,108 ಜನರು ನೇರವಾಗಿ ಖಜಾನೆಯಿಂದ ನಿವೃತ್ತಿ ವೇತನವನ್ನು ಪಡೆಯುತ್ತಿದ್ದಾರೆ

ನಿವೃತ್ತಿ ಮತ್ತು ಕುಟುಂಬ ವೇತನಗಳ ಕನಿಷ್ಠ ಮಿತಿಯಲ್ಲಿ ಹೆಚ್ಚಳ

9 10 ಪ್ರಸ್ತುತ ಕನಿಷ್ಠ ನಿವೃತ್ತಿ ವೇತನವನ್ನು ರೂ 1,055 ಕ್ಕೆ ಮತ್ತು ಗರಿಷ್ಠ ನಿವೃತ್ತಿ ವೇತನವನ್ನು ರೂ 10,610 ಕ್ಕೆ ಸೀಮಿತಗೊಳಿಸಲಾಗಿದೆ ಇದರಿಂದಾಗಿ ದಿನಾಂಕ 1–04–1998 ಕ್ಕಿಂತ ಮೊದಲು ನಿವೃತ್ತಿಯಾಗಿರುವ ಅದರಲ್ಲೂ ಕೆಳಹಂತದ ನಿವೃತ್ತ ನೌಕರರಿಗೆ ಬಹು ಕಡಿಮೆ ನಿವೃತ್ತಿ ವೇತನ ದೊರೆಯುತ್ತಿದೆ ಕೇಂದ್ರ ಸರ್ಕಾರ ಮತ್ತು ನೆರೆ ರಾಜ್ಯಗಳಾದ ಆಂಧ್ರ, ಕೇರಳ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ನೀಡುತ್ತಿರುವ ಕನಿಷ್ಠ ನಿವೃತ್ತಿ ವೇತನಕ್ಕಿಂತ ಇದು ಕಡಿಮೆಯಾಗಿರುವುದನ್ನು ಆಯೋಗವು ಗಮನಿಸಿದೆ

9 11 01–07–2005 ರಲ್ಲಿದ್ದಂತೆ ಕನಿಷ್ಠ ನಿವೃತ್ತಿ ವೇತನ / ಕುಟುಂಬ ವೇತನ, ರೂ 1055+ರೂ 749= ರೂ 1804 ಇದ್ದು, ಇದನ್ನು ರೂ 2250 ಗಳಿಗೆ ಹೆಚ್ಚಿಸಲಾಗಿ ಇದರಿಂದ ಶೇಕಡಾ 24 ರಷ್ಟು ಹೆಚ್ಚಿಸಿದಂತಾಗುತ್ತದೆ

ಹಿಂದೆ ನಿವೃತ್ತಿ ಯಾದವರ ನಿವೃತ್ತಿ ವೇತನ ಪರಿಷ್ಕರಣೆ

9 12 ಬಹಳ ಹಿಂದೆ ನಿವೃತ್ತರಾದವರ ನಿವೃತ್ತಿ ವೇತನವು ಬಹಳ ಕಡಿಮೆ ಇದ್ದು, ಅದನ್ನು ಪರಿಷ್ಕರಿಸಬೇಕೆಂದು ಕೋರಿಕೆಗಳು ಬಂದಿರುತ್ತವೆ 1982 ರ ಪೂರ್ವದಲ್ಲಿ, ಅದರಲ್ಲೂ 1977 ರ ಪೂರ್ವದಲ್ಲಿ ನಿವೃತ್ತಿ ಆದವರ ಮೂಲ ವೇತನವು ಬಹಳಷ್ಟು ಕಡಿಮೆ ಪ್ರಮಾಣದಲ್ಲಿದ್ದ ಪ್ರಯುಕ್ತ, ಅವರು ಬಹು ಕಡಿಮೆ ನಿವೃತ್ತಿ ವೇತನವನ್ನು

ಪಡೆಯುತ್ತಿರುವರು ಅಂತಹ ನಿವೃತ್ತ ನೌಕರರು ಈಗಾಗಲೇ ವಯೋವೃದ್ಧ ರಾಗಿರುವುದರಿಂದ ಅವರ ನಿವೃತ್ತಿ ವೇತನವನ್ನು ಹೆಚ್ಚಿಸಿದರೂ, ಕಾಲಕ್ರಮೇಣ ಇದರಿಂದ ಸರ್ಕಾರದ ಮೇಲೆ ಆಗುವ ಹೊರೆ ಕಡಿಮೆಯಾಗುತ್ತಾ ಹೋಗುತ್ತದೆ

9 13 ನಿವೃತ್ತಿದಾರನು/ಳು ಪೂರ್ಣ ಪ್ರಮಾಣದ ಅರ್ಹದಾಯಕ ಸೇವೆ ಸಲ್ಲಿಸಿದ್ದಲ್ಲಿ, ಅವನು/ಳು ನಿವೃತ್ತಿ ಹೊಂದಿದ ದಿನಾಂಕದಂದು ಧಾರಣ ಮಾಡಿದ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಹಂತದ ಶೇ 50 ರಷ್ಟು ಇರಬೇಕೆಂದು, ಆಯೋಗವು ಶಿಫಾರಸ್ಸು ಮಾಡಿದೆ ಅದೇ ರೀತಿ ಕುಟುಂಬ ವೇತನವನ್ನು ನೌಕರನು/ಳು ನಿವೃತ್ತಿ ಸಮಯದಲ್ಲಿ/ ಅಥವಾ ಮರಣ ಹೊಂದಿದ ಸಮಯದಲ್ಲಿ ಧಾರಣ ಮಾಡಿದ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಹಂತದ ಶೆ 30 ರಷ್ಟು ಇರಬೇಕೆಂದು ಆಯೋಗವು ಶಿಫಾರಸ್ಸು ಮಾಡಿದೆ

ಏಕ ಪ್ರಕಾರವಾಗಿ ಕುಟುಂಬ ವೇತನ ಪರಿಷ್ಕರಣೆ

9 14 ಕೇಂದ್ರ ಸರ್ಕಾರವು, ದಿನಾಂಕ 1–1–1996 ರಿಂದ ಎಲ್ಲಾ ನೌಕರರಿಗೂ ಅನ್ವಯವಾಗುವಂತೆ, ಶೇ 30 ರಷ್ಟು ಉಪಲಬ್ಧಗಳನ್ನು (ಕನಿಷ್ಠ ಮಿತಿಗೊಳಪಟ್ಟು) ಕುಟುಂಬ ವೇತನವನ್ನಾಗಿ ನೀಡಲು ಆದೇಶಿಸಿದೆ ಆಂಧ್ರ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಸಹ ಇದನ್ನು ಅಳವಡಿಸಿಕೊಂಡಿವೆ ಮಹಾರಾಷ್ಟ್ರವು ನಿವೃತ್ತಿ ವೇತನಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ನೀತಿಯನ್ನೇ ಪಾಲಿಸುತ್ತಿದೆ ಆದರೆ, ಈಗಿರುವ ನಿರ್ಬಂಧಗಳಿಂದ, ನಮ್ಮ ರಾಜ್ಯದ ಬಹು ಪಾಲು ನೌಕರರ ಕುಟುಂಬಗಳು ವೇತನದ ಶೇ 30 ರಷ್ಟು ಕುಟುಂಬ ವೇತನ ಪಡೆಯಲು ಸಾಧ್ಯವಾಗುತ್ತಿಲ್ಲ

9 15 ಕನಿಷ್ಠ ರೂ 2250/– ಮಿತಿಗೆ ಒಳಪಟ್ಟು, ಒಂದೇ ಪ್ರಮಾಣದಲ್ಲಿ ಉಪಲಬ್ಧದ ಶೇ 30 ರಷ್ಟನ್ನು ಕುಟುಂಬ ವೇತನವನ್ನಾಗಿ ಹಾಗೂ ಗರಿಷ್ಠ ಮಿತಿಯನ್ನು ಪರಿಷ್ಕರಿಸಿದ ಗರಿಷ್ಠ ವೇತನ ಶ್ರೇಣಿಯ ಗರಿಷ್ಠ ಹಂತದ ಶೇ 30 ರಷ್ಟಕ್ಕೆ ಅಂದರೆ ರೂ 13,317/– ಕ್ಕೆ ನಿಗದಿಪಡಿಸಲು ಆಯೋಗ ಸೂಚಿಸಿದೆ

ನಿವೃತ್ತಿ ದಿನಾಂಕದಂದು ಪಡೆಯುತ್ತಿದ್ದ ವೇತನದ ಶೇ 50 ರಷ್ಟನ್ನು ನಿವೃತ್ತಿ ವೇತನವೆಂದು ನಿಗದಿಸಿದೆ

9 16 ದಿನಾಂಕ 30–09–2003 ರ ಕ್ಕಿಂತ ಮೊದಲಿ, ನಿವೃತ್ತಿಯಾದ ಸರ್ಕಾರಿ ನೌಕರರು ನಿವೃತ್ತಿ ಹೊಂದುವ ದಿನಾಂಕದಂದು ಪಡೆಯುತ್ತಿದ್ದ ವೇತನದ ಶೇ 50 ರಷ್ಟನ್ನು ನಿವೃತ್ತಿ ವೇತನವನ್ನಾಗಿ ನೀಡಲಾಗುತ್ತಿತ್ತು ದಿನಾಂಕ 30–09–2003 ರ ಆದೇಶದಲ್ಲಿ ಸರ್ಕಾರವು ಈ ಸೌಲಭ್ಯವನ್ನು ಹಿಂತೆಗೆದುಕೊಂಡಿದೆ ಆಯೋಗವು ಪರಿಶೀಲಿಸಿ, ನಿವೃತ್ತಿ ದಿನಾಂಕದಂದು ನೌಕರನು/ಳು ಪಡೆಯುತ್ತಿದ್ದ ವೇತನವನ್ನು ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳಿಗಾಗಿ ಉಪಲಬ್ಧಗಳನ್ನು ಲೆಕ್ಕ ಹಾಕುವಾಗ ಶೇ 50 ರಷ್ಟನ್ನು ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದೆ

ಮರಣ ಮತ್ತು ನಿವೃತ್ತಿ ಉಪದಾನದ (D.C.R.G) ಗರಿಷ್ಠ ಮಿತಿಯಲ್ಲಿ ಹೆಚ್ಚಳ

9 17 ವೇತನವನ್ನು ಪರಿಷ್ಕರಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಪರಿಷ್ಕರಿಸಿದ ವೇತನ ಜಾರಿಗೆ ಬರುವ ದಿನಾಂಕದಿಂದ ಮರಣ ಮತ್ತು ನಿವೃತ್ತಿ ಉಪದಾನದ ಗರಿಷ್ಠ ಮಿತಿಯನ್ನು ರೂ 2 50 ಲಕ್ಷದಿಂದ ರೂ 3 00 ಲಕ್ಷಗಳಿಗೆ ಹೆಚ್ಚಿಸಲಾಗಿದೆ

'ನಿವೃತ್ತಿದಾರರ ನಿರ್ದೇಶನಾಲಯ'

9 18 ನಿವೃತ್ತಿ ಮತ್ತು ಕುಟುಂಬ ವೇತನದಾರರ ಕುಂದು ಕೊರತೆಗಳನ್ನು ಸಕಾಲದಲ್ಲಿ ಪರಿಶೀಲಿಸಿ ಪರಿಹಾರ ನೀಡಲು ಹಾಗೂ ಈ ಬೃಹತ್ ಮೊತ್ತದ ನಿವೃತ್ತಿದಾರರ ನಿವೃತ್ತಿ ವೇತನದ ಬಟವಾಡೆಯನ್ನು ಸಮರ್ಪಕವಾಗಿ ಪರಿಶೀಲಿಸಿ ನೀಡಲು ಮತ್ತು ಬ್ಯಾಂಕುಗಳ ಮೂಲಕ ವಿತರಿಸಲಾಗುವ ನಿವೃತ್ತಿ ವೇತನದ ಮೇಲೆ ನಿಗಾ ಇಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುವ ಸಂಬಂಧ ಒಂದು **" ನಿವೃತ್ತಿ ವೇತನದಾರರ ನಿರ್ದೇಶನಾಲಯ"** ವನ್ನು ಸ್ಥಾಪಿಸಲು ಆಯೋಗವು ಶಿಫಾರಸ್ಸು ಮಾಡುತ್ತದೆ ಈ ನಿರ್ದೇಶನಾಲಯವು ಅಸ್ತಿತ್ವಕ್ಕೆ ಬಂದ ನಂತರ ನಿವೃತ್ತಿ ಮತ್ತು ಕುಟುಂಬ ನಿವೃತ್ತಿ ವೇತನದಾರರಿಗೆ ಮುಂದೆ ಜಾರಿಗೆ ತರಬಹುದಾದ ಆರೋಗ್ಯ ನಿಧಿ/ ವೈದ್ಯಕೀಯ ಯೋಜನೆ ಇತ್ಯಾದಿಗಳ ಜವಾಬ್ದಾರಿಯನ್ನು ಇದಕ್ಕೆ ವಹಿಸಬಹುದು

ಕೋಶ ರಚನೆ

9 19 ರಾಜ್ಯ, ಕೇಂದ್ರ ಮತ್ತು ನೆರೆ ರಾಜ್ಯಗಳಲ್ಲಿ ಆಗಿಂದಾಗ್ಗೆ, ಪರಿಷ್ಕರಣೆಗೊಳ್ಳುವ ವೇತನ ರಚನೆ, ಭತ್ಯೆಗಳ ಬಗ್ಗೆ ಅಂಕಿ ಅಂಶಗಳನ್ನು ಮತ್ತು ಮಾಹಿತಿಯನ್ನು ನಿರ್ವಹಿಸಲು ಒಂದು **"ವೇತನ ಸಂಶೋಧನಾ ಕೋಶವನ್ನು"** ರಚಿಸುವುದು ಸೂಕ್ತವೆಂದು ಆಯೋಗವು ಭಾವಿಸುತ್ತದೆ ಈ ಕೋಶವು ವೇತನ ಪರಿಷ್ಕರಣೆಯಾದ ನಂತರ ಉದ್ಭವಿಸಬಹುದಾದ ವೇತನಗಳಲ್ಲಿನ ಅಸಮಾನತೆ, ತಾರತಮ್ಯತೆ ಮತ್ತಿತರ ಸಮಸ್ಯೆಗಳನ್ನು ಪರಿಶೀಲಿಸಿ, ವಿಶ್ಲೇಷಿಸಿದ ವರದಿಗಳನ್ನು ಮುಂದೆ ಸರ್ಕಾರವು ರಚಿಸಬಹುದಾದಂತಹ ವೇತನ ಆಯೋಗ, ಅಧಿಕಾರಿಗಳ ಸಮಿತಿ ಮತ್ತು ವೇತನ ತಾರತಮ್ಯ ಸಮಿತಿಗಳ ಉಪಯೋಗಕ್ಕೆ ಸಲ್ಲಿಸಬಹುದು

1344 (1449) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಪ್ರಥಮ ದರ್ಜೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳು ಎಷ್ಟು? ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು,

ಆ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಯಾವ ಇಲಾಖೆಗಳ ಸಿಬ್ಬಂದಿಗಳನ್ನು ತೆಗೆದುಕೊಳ್ಳಲು ಅವಕಾಶವಿದೆ, (ಇಲಾಖಾವಾರು ನಿಗದಿ ಮಾಡಿದ ಹುದ್ದೆಗಳ ವಿವರ ನೀಡುವುದು),

ಇ) ಈಗಾಗಲೇ ಭರ್ತಿ ಮಾಡಿರುವ ಇಲಾಖಾವಾರು ನೌಕರರುಗಳ ಸಂಖ್ಯೆ ಎಷ್ಟು,

ಈ) ಇಲಾಖಾವಾರು ಕೊರತೆ ಬಿದ್ದಿರುವ ಸಂಖ್ಯೆಗಳು ಎಷ್ಟು,

ಉ) ಕೊರತೆ ಇರುವ ಇಲಾಖೆವಾರು ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು,

ಊ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?